# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2650/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/10/2016

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಸ್ವಯಂ ಪ್ರೇರಣಾ ಪ್ರಕರಣವನ್ನು ಈ ಸಂಸ್ಥೆಯಲ್ಲಿ ನೋಂದಾಯಿಸಿದನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ತಮ್ಮ ವರದಿ ಸಲ್ಲಿಸುವ ಬಗ್ಗೆ.

*-*-*

1. ದೂರುದಾರರಾದ ಶ್ರೀ ವಿಠ್ಠಲಯಶವಂತರಾಯ ಬಿರಾದಾರ, ಹಿಕ್ಕನಗುತ್ತಿ ಗ್ರಾಮ, ಸಿಂದಗಿ ತಾಲ್ಲೂಕು ಇವರು ತಹಶೀಲ್ದಾರ್ ಕಚೇರಿ, ಸಿಂದಗಿ ಇಲ್ಲಿ ಯಾವುದೇ ಕೆಲಸಗಳಾಗುತ್ತಿಲ್ಲವೆಂದು, ತಾತ್ಕಾಲಿಕ ಪೋಡಿಗಾಗಿ ವಾಟ್ನಿಗಾಗಿ, ಜಮೀನಿನ ಸರ್ವೇಗಾಗಿ, ಅರ್ಜಿಗಳನ್ನು ರೈತರು ಸಲ್ಲಿಸುತ್ತಿದ್ದರೂ ಯಾವುದೇ ಕೆಲಸಗಳಾಗುತ್ತಿಲ್ಲವೆಂದು ಹಿಂದಿನ ಗೌರವಾನ್ವಿತ ಉಪಲೋಕಾಯುಕ್ತರಿಗೆ ಸಲ್ಲಿಸಿದ ದೂರಿನ ಆಧಾರದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2)ರಲ್ಲಿ ಪ್ರದತ್ತವಾದ ಅಧಿಕಾರದಡಿ ತಹಶೀಲ್ದಾರ್, ಸಿಂದಗಿ ಹಾಗೂ ಸಹಾಯಕ ಭೂ ಮಾಪನಾ ನಿರ್ದೇಶಕರ ಮೇಲೆ ಪ್ರಕರಣವನ್ನು ನೊಂದಾಯಿಸಲು ಆದೇಶಿಸಿದ್ದು, ಅದರಂತೆ ಸ್ವಯಂ ಪ್ರೇರಿತ ಪ್ರಕರಣವನ್ನು ನೊಂದಾಯಿಸಲಾಗಿರುತ್ತದೆ. ದೂರುದಾರರ ದೂರಿನನ್ವಯ ತಹಶೀಲ್ದಾರ್‌ರವರಿಂದ ಹಾಗೂ ಬಿಜಾಪುರದ ನಮ್ಮ ಸಂಸ್ಥೆಯ ಪೊಲೀಸ್‌ನವರಿಂದ ವರದಿ ಪಡೆಯಲು ಆದೇಶಿಸಿದ್ದು, ಅದರಂತೆ ಬಿಜಾಪುರದ ಸಿಂದಗಿ ತಾಲ್ಲೂಕಿನ ತಹಶೀಲ್ದಾರ್‌ರವರಿಗೂ ಹಾಗೂ ಬಿಜಾಪುರದ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರಿಗೂ ಪತ್ರ ಬರೆದು ವರದಿ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

2. ಈ ಹಂತದಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಂದ ಪತ್ರ ಬಂದಿದ್ದು, ಅದರಲ್ಲಿ ಸಿಂದಗಿ ತಾಲ್ಲೂಕಿನ ತಹಶೀಲ್ದಾರರ ಪತ್ರದ ಬಗ್ಗೆ ಉಲ್ಲೇಖಿಸಲಾಗಿದ್ದು, ಇವರ ಪತ್ರದಲ್ಲಿ ದೂರುದಾರರ ದೂರಿಗೆ ಸಂಬಂಧಿಸಿದಂತೆ ವಿವರಣೆಯನ್ನು ಪಟ್ಟಿ ರೂಪದಲ್ಲಿ ನೀಡಿರುತ್ತಾರೆ. ಸದರಿ ವಿವರಣಾ ಪಟ್ಟಿಯಲ್ಲಿ ಅರ್ಜಿದಾರರು11-ಇ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕಾಗಿದ್ದು, ತತ್ಕಾಲ್ ಪೋಡಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ತಾತ್ಕಾಲ್ ಪೋಡಿಯಲ್ಲಿ ವಿಭಾಗ ಮಾಡಲು ಕಷ್ಟಸಾಧ್ಯವೆಂದು ತಿಳಿಸಿರುತ್ತಾರೆ. ವಾಟ್ನಿ ಸರ್ವೇಗೆ ಸಂಬಂಧಿಸಿದಂತೆ ಆದ್ಯತೆಯ ಮೇರೆಗೆ ಕ್ರಮ ಕೈಗೊಂಡಿದ್ದು ಕಡತವನ್ನು ಪರಿಶೀಲನೆ ಮಾಡಲು ಕಾಲಾವಕಾಶ ಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಸರ್ವೇಗೆ ಸಂಬಂಧಿಸಿದಂತೆ 2013ರ ಇಲಾಖಾ

ನಿಯಮದ ಪ್ರಕಾರ ಕೆಲಸ ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ಪೋಡಿ ಅಭಿಯಾನದಡಿಯಲ್ಲಿ ಜನವರಿ–2015ರಿಂದ ಮೋಜಣಿ ತಂತ್ರಾಂಶದಲ್ಲಿ ಪೋಡಿ ಪ್ರಕರಣವನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

3. ಹಿಂದಿನ ಗೌರವಾನ್ವಿತ ಉಪಲೋಕಾಯುಕ್ತರವರ ಆದೇಶದಂತೆ ಎದುರುದಾರರಿಂದ ವರದಿ ಸಲ್ಲಿಸಲು ತಿಳಿಸಲಾಗಿದ್ದು, ಸಿಂದಗಿ ತಾಲ್ಲೂಕಿನ ತಹಶಿಲ್ದಾರ್ 1ನೇ ಎದುರುದಾರರು ವರದಿಯನ್ನು ಸಲ್ಲಿಸಿದ್ದು, ಕೃಷ್ಣಮೇಲ್ದಂಡೆ ಯೋಜನೆಯಡಿಯಲ್ಲಿ ರೈತರ ಜಮೀನನ್ನು ಈಗಾಗಲೇ ಭೂಸ್ವಾಧೀನವಾಗಿದ್ದು ಅವಾರ್ಡ್ ಪ್ರಕಾರ ಸದರಿ ಸರ್ವೇ ನಂಬರ್‌ಗಳಲ್ಲಿ ಭೂ ಸ್ವಾಧೀನವಾದ ಕ್ಷೇತ್ರ ಕಡಿಮೆಯಾಗಿರುವುದಿಲ್ಲ. ಅಂತಹ ಜಮೀನುಗಳು ತಮಗೆ ವರದಿಯಾಗಿದ್ದು ಆಯುಕ್ತರು ಪುನರ್ ವಸತಿ ಹಾಗೂ ಪುನರ್ ನಿರ್ಮಾಣ, ಭೂ ಸ್ವಾಧೀನ ಕ್ರಷ್ಣಾ ಮೇಲ್ದಂಡೆ ಯೋಜನೆ ನವನಗರ ಬಾಗಲಕೋಟೆ ಇವರು ದಿನಾಂಕ: 10/07/2014ರ ನಡುವಳಿಕೆಗಳಲ್ಲಿ ಹರಾ ಹುತಾರೆಯಲ್ಲಿ ಭೂ ಸ್ವಾಧೀನವಾದ ನಂತರ ಕೆಲವು ಜಮೀನುಗಳಲ್ಲಿ 2 ಅಥವಾ ಅದಕ್ಕಿಂತ ಹೆಚ್ಚಾಗಿನ ಹಿಸ್ಸೇಯಾದ ಪ್ರಕರಣಗಳಲ್ಲಿ ಭೂ ಸ್ವಾಧೀನ ಕ್ಷೇತ್ರವನ್ನು ಸಮನಾಗಿ ದಾಖಲಿಸಲು ತಿಳಿಸಿರುತ್ತಾರೆ. ಅದರಂತೆ ಹರದಲ್ಲಿ ದಾಖಲೆ ಮಾಡಿದ್ದು ಇರುತ್ತದೆ. ಆದರೆ ರೈತರು ಕಾರ್ಯಾಲಯಕ್ಕೆ ಬಂದು ತಮ್ಮ ಜಮೀನಿನಲ್ಲಿ ಕೆನಾಲ್ ಹೋಗಿರುವುದಿಲ್ಲ ಆದ್ದರಿಂದ ಅದನ್ನು ಹರದಿಂದ ತೆಗೆಯಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಸದರಿ ರೈತರಿಗೆ ಸಂಬಂಧಿಸಿದ ಡೈರಿ ಮೇಲೆ ಮಾನ್ಯ ಉಪ ವಿಭಾಗಾಧಿಕಾರಿಗಳು ಇಂಡಿ ಇವರಲ್ಲಿ ಮೇಲ್ಮನವಿ ಸಲ್ಲಿಸಿ ಆದೇಶ ಆದ ನಂತರ, ಆದೇಶದಂತೆ ಜಮೀನಿನ ಹರದಲ್ಲಿ ಕ್ಷೇತ್ರ ದುರಸ್ತಿ ಮಾಡಿಕೊಡಲಾಗುತ್ತದೆಂದು ತಿಳಿಸಲಾಗಿತ್ತು ಎಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ರೈತರಿಗೂ ಸಹ ತಿಳಿಸಲಾಗಿರುತ್ತದೆ. ಭೂ ಸ್ವಾಧೀನವಾದ ಜಮೀನುಗಳಲ್ಲಿ ಆವಾರ್ಡ್ ಪ್ರಕಾರ ಜಮೀನಿನ ವಿಸ್ತೀರ್ಣವನ್ನು ಕಡಿಮೆಗೊಳಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು (2ನೇ ಎದುರುದಾರರು) ಈ ಹಿಂದೆ ತಾವು ಸಲ್ಲಿಸಿದ್ದ ಪಟ್ಟಿ ರೂಪದ ವರದಿಯನ್ನೇ ತಮ್ಮ ಪತ್ರಕ್ಕೆ ಅಡಕ ಮಾಡಿ ಸಲ್ಲಿಸಿರುತ್ತಾರೆ.

4. ದೂರುದಾರರು ಸಲ್ಲಿಸಿದ್ದ ದೂರಿನ ಅಂಶಗಳನ್ನು ಹಾಗೂ ಎದುರುದಾರರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿದಲ್ಲಿ 1ನೇ ಎದುರುದಾರರು ತಮ್ಮ ವರದಿಯ ಜೊತೆ ಪುನರ್ ವಸತಿ ಆಯುಕ್ತರು ಕೃಷ್ಣಾ ಮೇಲ್ದಂಡೆ ಯೋಜನೆ ನವನಗರ ಬಾಗಲಕೋಟೆ ಇವರ ಭೂ ಸ್ವಾಧೀನ ಪ್ರಗತಿಯ ಪರಿಶೀಲನಾ ಸಭೆಯ ನಡುವಳಿಗಳ ಪ್ರತಿಯನ್ನು ಹಾಜರುಪಡಿಸಿದ್ದು, ಇದಲ್ಲದೇ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಇಂಡಿ ಇವರು ದಿ:25/06/2015ರ ಪತ್ರದ ಮುಖೇನ ವರದಿಯನ್ನು ಸಲ್ಲಿಸಿದ್ದು, ಅರ್ಜಿದಾರರು ಈ ಹಿಂದೆ ನೀಡಿದ್ದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಿಕ್ಕನಗುತ್ತಿ ಗ್ರಾಮ

ಸರ್ವೇ ನಂ. 123 ರ ತಾತ್ಕಾಲಿಕ ಪೋಡಿ ಆಗಿರುವುದಿಲ್ಲ, ತಾತ್ಕಾಲಿಕ ಪೋಡಿಯಲ್ಲಿ 11ಇ ಅಡಿಯಲ್ಲಿ ಅವರು ಅರ್ಜಿ ಸಲ್ಲಿಸಬೇಕಾಗಿದ್ದು, ಅದರಂತೆ ಅರ್ಜಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿದ ತಕ್ಷಣ ಅವರ ತಾತ್ಕಾಲಿಕ ಪೋಡಿಯ ಕ್ರಮವನ್ನು ಕೈಗೊಂಡು ಅವರ ಅರ್ಜಿಯನ್ನು ವಿಲೇ ಮಾಡಲಾಗುವುದೆಂದು ಹಾಗೆಯೇ ಸಿಂಧಗಿ ತಾಲ್ಲೂಕಿನ ಕೋರಹಳ್ಳಿ ಗ್ರಾಮದ ರಿ.ಸ. ಸರ್ವೇ ನಂ. 253ರ ಪೋಡಿ ಆಗಿಲ್ಲವೆಂದು, ಆದರೆ, ಅಳತೆ ಕೆಲಸ ಮುಗಿಸಲಾಗಿದೆ ಎಂದು ಪೋಡಿಯನ್ನು ಮಾಡುವ ಪೂರ್ವದಲ್ಲೇ ಸ್ಥಳ ಪರಿಶೀಲನೆ ಮಾಡಬೇಕಾಗಿರುವುದರಿಂದ, ಸ್ಥಳ ಪರಿಶೀಲನೆ ಮಾಡಿ ಮೇಲಧಿಕಾರಿಗಳಿಗೆ ವರದಿ ನೀಡಲಾಗುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ವದೂರುದಾರರು ತಿಳಿಸಿದಂತ ವಿಭೂತಿಹಳ್ಳಿ ಗ್ರಾಮದ ಸರ್ವೇ ನಂ. 53/1+2/ಅ1ರ ಮೋಜಣಿ ಕಾರ್ಯ ಮುಗಿದಿರುತ್ತದೆ ಎಂದು ಹಾಗೆ ಹಿಕ್ಕನಗುತ್ತಿ ಗ್ರಾಮದ ಸರ್ವೇನಂ. 131ರ ಅಳತೆ ಕೆಲಸ ಪೂರ್ಣಗೊಂಡಿದ್ದು, ಪೋಡಿ ಕೆಲಸ ಬಾಕಿ ಇರುವುದಿಲ್ಲವೆಂದು ತಿಳಿಸಿರುವುದರಿಂದ, ಸದರಿ ಆಸ್ತಿಗೆ ಸಂಬಂಧಿಸಿದ ಅರ್ಜಿಗಳು ವಿಲೇ ಆಗದೇ ಇರುವುದು ಸ್ಪಷ್ಟ ಪಡುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಈ ಮೇಲೆ ಹೇಳಿದ ಹಿಕ್ಕನಗುತ್ತಿ ಗ್ರಾಮದ ಸರ್ವೇ ನಂ.123 ಹಾಗೂ ಕೋರಹಳ್ಳಿ ಗ್ರಾಮದ ಸರ್ವೇ ನಂ. 253ರ ಪ್ರಕರಣಗಳಿಗೆ ಸಂಬಂಧಿಸಿದಂತೆ ಭೂಮಾಪನ ಪ್ರಕ್ರಿಯೆಯನ್ನು ಕೈಗೊಂಡು ಸದರಿ ಸರ್ವೇ ನಂಬರಿಗೆ ಸಂಬಂಧಿಸಿದ ಪೋಡಿ ಪ್ರಕರಣವನ್ನು ತಕ್ಷಣವೇ ನಿಯಮಾನುಸಾರ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.